 PW-1 – ಮಹಾದೇವಿ ಮುತ್ತಣ್ಣವರ ಸಾಕ್ಷಿಯನ್ನು ದಿನಾಂಕಃ 22/08/2024 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಎದುರುದಾರ ನಂ .2 ರ ಪರ ವಕೀಲರಿಂದಃ**

ಮಧು ಮತ್ತು ಖುಷಿ ನನ್ನ ಮಕ್ಕಳು. ಮಧುಗೆ 14 ವರ್ಷ ವಯಸ್ಸು ಮತ್ತು ಖುಷಿ ಗೆ 7 ವರ್ಷ ವಯಸ್ಸು. ನನ್ನ ಇಬ್ಬರು ಮಕ್ಕಳು ಶಾಲೆಗೆ ಹೋಗುತ್ತಾರೆ. ನನ್ನ ಇಬ್ಬರು ಮಕ್ಕಳು ಶಾಲೆಯಲ್ಲಿ ಓದುತ್ತಿದ್ದಾರೆ ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. 4 ಮತ್ತು 5 ನೇ ಅರ್ಜಿದಾರರು ನನ್ನ ಅತ್ತೆ ಮಾವ. ಮೃತ ಬಸಪ್ಪ ಊರ್ಫ ಬಸವರಾಜ ಇವರಿಗೆ ನೀವು ಹೆಂಡತಿ ಮತ್ತು ಮಕ್ಕಳು ಮತ್ತು 4 ಮತ್ತು 5 ನೇ ಅರ್ಜಿದಾರರು ಅವರ ತಂದೆ ತಾಯಿ ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೇವೆ. ವಾರಸುದಾರರು ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ , ನೀವು ಸದರಿ ಬಸಪ್ಪ ರವರ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ.

ಮೃತ ಬಸಪ್ಪ ಊರ್ಫ ಬಸವರಾಜ ರವರ ಅಂತ್ಯಸಂಸ್ಕಾರಕ್ಕೆ ರೂ.1,00,000/- ಖರ್ಚು ಮಾಡಿದ್ದೇನೆ ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ, ಆದರೆ ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ನೀವು ರೂ.1,00,000/- ಖರ್ಚು ಮಾಡಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮೃತ ಬಸಪ್ಪ ಊರ್ಫ ಬಸವರಾಜ ರವರಿಗೆ ತೀರಿಕೊಂಡಾಗ 30 ವರ್ಷ ವಯಸ್ಸು ಆಗಿತ್ತು. ಅವರು ಶಾಲೆಗೆ ಹೋಗಿದ್ದೀರಾ ಎಂದರೆ ಸಾಕ್ಷಿ 1 ನೇ ತರಗತಿಯವರೆಗೆ ಓದಿರಬಹುದು ಎಂದು ಹೇಳುತ್ತಾರೆ. ಮೃತ ಬಸಪ್ಪ ಊರ್ಫ ಬಸವರಾಜ ತೀರಿಕೊಂಡಾಗ 30 ವರ್ಷ ವಯಸ್ಸು ಆಗಿತ್ತು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ ಎಂದು ಹೇಳುತ್ತಾರೆ. ಸದರಿ ಮೃತ ಬಸಪ್ಪ ಊರ್ಫ ಬಸವರಾಜ 1 ನೇ ಎದುರುದಾರ ಬಳಿ ಕೆಲಸ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಿ ಮತ್ತು ಅವರ ಮತ್ತು ನಿಮ್ಮ ಗಂಡನ ನಡುವೆ ಯಾವುದೇ ಸಂಬಂಧ ಇಲ್ಲ ಎಂದರೆ

ಸರಿಯಲ್ಲ. 1 ನೇ ಎದುರುದಾರ ನ ಹತ್ತಿರನಿಮ್ಮ ಗಂಡ ಕಳೆದ 4 ವರ್ಷಗಳಿಂದ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ, ಆದರೆ ಕೆಲಸ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಅವರ ಬಳಿ ಕೆಲಸ ಮಾಡದೇ ಇರುವುದರಿಂದ ನೀವು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರ ನ ಹತ್ತಿರ ನಿಮ್ಮ ಗಂಡ ಕಳೆದ 4 ವರ್ಷಗಳಿಂದ ಕೆಲಸ ಮಾಡುತ್ತಿದ್ದರು ಮತ್ತು ಅವರಿಗೆ ತಿಂಗಳಿಗೆ ರೂ. 20,000/- ಸಂಬಳ ಇತ್ತು ಮತ್ತು ದಿನಕ್ಕೆ ರೂ. 300/- ಭತ್ಯೆ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಗಂಡನಿಗೆ ವಾಹನ ಚಲಾನಪರವಾನಿಗೆ ಪತ್ರ ಇತ್ತಾ ಎಂದು ಕೇಳಲಾಗಿ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ಗಂಡ ಹೆಚ್ಚಿನ ಕುಡಿತಕ್ಕೆ ಒಳಗಾಗಿ ತೀರಿಕೊಂಡಿದ್ದಾನೆ ಹೊರತು ಅಪಘಾತದಲ್ಲಿ ಅಲ್ಲ ಎಂದರೆ ಸರಿಯಲ್ಲ. ನಿಮ್ಮ ಗಂಡ ಮತ್ತು 1 ನೇ ಎದುರುದಾರ ಬಳಿ ಯಾವುದೇ ಡ್ರೈವಿಂಗ್ ಕೆಲಸಕ್ಕೆ ಹೋಗದೇ ಇರುವುದರಿಂದ, ನಿಮ್ಮ ಗಂಡ ಮತ್ತು 1 ನೇ ಎದುರುದಾರನ ನಡುವೆ ಮಾಲೀಕ ವತ್ತು ನೌಕರನ ಸಂಬಂಧ ಇಲ್ಲದೇ ಇರುವುದರಿಂದ 2 ನೇ ಎದುರುದಾರರು ನಿಮಗೆ ಪರಿಹಾರ ಕೊಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

2 ನೇ ಎದುರದಾರ ಪರ ವಕೀಲರು 1 ನೇ ಎದುರುದಾರ ಪರ ವಕೀಲರು ದಿಃ 01/08/2024 ರಂದು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ ಎಂದು ಹೇಳುತ್ತಾರೆ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
22.08.2024
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**